KARNATAKA LEGISLATIVE ASSEMBLY

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : ೨1/11/19

# ಅಯ್ಯಪ್ಪ ದರ್ಶನ ವಿಶೇಷ ಶಾಸನ

**ಕೇರಳ ಸರ್ಕಾರಕ್ಕೆ ಸುಪ್ರೀಂ ಸೂಚನೆ**



- ಶಬರಿಮಲೈ ಸನ್ನಿಧಿ ಆಡಳಿತ ನಿರ್ವಹಣೆಗೆ ಹೊಸ ಕಾಯ್ದೆ
- ಜನವರಿ 3ನೇ ವಾರದೊಳಗೆ ಕರಡು ಮಂಡನೆಗೆ ಆದೇಶ
- ವಿಸ್ತೃತ ಪೀಠದಿಂದ 2018ರ ತೀರ್ಪಿನ ಮರು ಪರಾಮರ್ಶೆ

ನವದೆಹಲಿ: ಐತಿಹಾಸಿಕ ಮತ್ತು ಪುರಾಣಪ್ರಸಿದ್ಧ ಶಬರಿಮಲೈ ದೇವಾಲಯದ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಾನೂನು ರಚಿಸುವಂತೆ ಸುಪ್ರೀಂ ಕೋರ್ಟ್ ಕೇರಳ ಸರ್ಕಾರಕ್ಕೆ ನಿರ್ದೇಶಿಸಿದೆ. ಮುಂದಿನ ವರ್ಷದ ಜನವರಿ ಮೂರನೇ ವಾರದೊಳಗೆ ಕರಡು ಶಾಸನವನ್ನು ನ್ಯಾಯಾಲಯದ ಮುಂದೆ ಮಂಡಿಸುವಂತೆ ಆದೇಶಿಸಲಾಗಿದೆ.

ಪ್ರಸ್ತುತ ಟ್ರಾವಂಕೂರ್ ದೇವಸಂ ಮಂಡಳಿಯ ಅಧಿಕಾರ ವ್ಯಾಪ್ತಿಯಲ್ಲಿರುವ ದೇವಾಲಯಗಳ ಆಡಳಿತಕ್ಕೆ ಸಂಬಂಧಪಟ್ಟ ಕಾನೂನಿಗೆ ಕೆಲ ತಿದ್ದುಪಡಿಗಳನ್ನು ಸಿದ್ಧಪಡಿಸಿರುವುದಾಗಿ ಕೇರಳ ಸರ್ಕಾರದ ಪರ ವಕೀಲರು ನ್ಯಾ.ಎನ್.ವಿ.ರಮಣ ನೇತೃತ್ವದ ಪೀಠಕ್ಕೆ ತಿಳಿಸಿದರು. ಅಯ್ಯಪ್ಪನ ಸನ್ನಿಧಿಗೆ ಭೇಟಿ ನೀಡುವ ಯಾತ್ರಾರ್ಥಿಗಳ ಸಂರಕ್ಷಣೆ ಸೇರಿದಂತೆ ಸಮಗ್ರ ಸ್ವರೂಪದ ಶಾಸನ ರೂಪಿಸಲು ಪೀಠವು ಸೂಚಿಸಿದೆ.

ದೇವಾಲಯ ಸಲಹಾ ಸಮಿತಿಯಲ್ಲಿ ಮಹಿಳೆಯರಿಗೂ ಪ್ರಾತಿನಿಧ್ಯ ಒದಗಿಸಲಾಗುತ್ತಿರುವ ಪ್ರಸ್ತಾಪ ಕೋರ್ಟ್‌ನಲ್ಲಿ ಚರ್ಚೆಗೆ ಕಾರಣವಾಯಿತು. ಆಗ ಸದ್ಯಕ್ಕೆ 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾತ್ರ ಸಮಿತಿಯಲ್ಲಿ ಅವಕಾಶ ಕಲ್ಪಿಸುವುದಾಗಿ ಕೇರಳ ಸರ್ಕಾರದ ವಕೀಲರು ಸಮಜಾಯಿಷಿ ನೀಡಿದರು. ಈ ಹಂತದಲ್ಲಿ ಮಧ್ಯಪ್ರವೇಶಿಸಿದ ನ್ಯಾಯಮೂರ್ತಿಗಳೊಬ್ಬರು ಎಲ್ಲಾ ವಯೋಮಿತಿಯ ಸ್ತ್ರೀಯರಿಗೆ ಪ್ರವೇಶ ನೀಡಬೇಕೆಂಬ 2018ರ ತೀರ್ಪು ಈಗಲೂ ಜಾರಿಯಲ್ಲಿದೆ ಎಂಬುದನ್ನು ನೆನಪಿಸಿದರು.

ಶಬರಿಮಲೈ ದೇವಾಲಯ ಆಡಳಿತಕ್ಕೆ ಸಂಬಂಧಿಸಿದಂತೆ 2011ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ಕುರಿತ ವಿಚಾರಣೆಯ ವೇಳೆ ಈ ಬೆಳವಣಿಗೆಯಾಗಿದ್ದು 2018 ಸೆ.28ರ ಐತಿಹಾಸಿಕ ತೀರ್ಪಿನ ಪರಾಮರ್ಶೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಈ ಹಿಂದಿನ ಮುಖ್ಯನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ಸಂವಿಧಾನಪೀಠ ಏಳು ಸದಸ್ಯರ ವಿಸ್ತೃತ ಪೀಠದ ಅವಗಾಹನೆಗೆ ಒಪ್ಪಿಸಿದೆ. ಧಾರ್ಮಿಕ ಹಕ್ಕಿನ ವಿಚಾರದಲ್ಲಿ ಮುಸ್ಲಿಂ ಮತ್ತು ಪಾರ್ಸಿ ಮಹಿಳೆಯರಿಗೆ ತೋರಲಾಗುತ್ತಿರುವ ತಾರತಮ್ಯದ ಬಗ್ಗೆಯೂ ಪರಿಶೀಲಿಸುವಂತೆ ಇದೇ ವೇಳೆ ಸೂಚಿಸಲಾಗಿತ್ತು.